

# ಹಿಂಸೆಯ ಹರಾಜು!

## ‘ಟಿಆರ್‌ಪಿ’ ಗೀಳಿಗೆ ಬಲಿಯಾಗುತ್ತಿದೆಯೇ ಮಹಿಳೆಯರ ಘನತೆ?

**ಹೆಣ್ಣುಮಕ್ಕಳನ್ನು ಮಿಕಗಳಂತೆ ಭಾವಿಸಿ ಬೇಟೆಗಾರರಂತೆ ಹಿಂಬಾಲಿಸುವ ಕೆಲವು ಮಾಧ್ಯಮಗಳ ಸಂವೇದನಾಶೂನ್ಯತೆ ದಿಗಿಲುಹುಟ್ಟಿಸುತ್ತದೆ. ಸುದ್ದಿಯ ಹೆಸರಲ್ಲಿ ಬಿತ್ತರಗೊಳ್ಳುತ್ತಿರುವ ಪರೋಕ್ಷ ಹಿಂಸೆ ನಮ್ಮಲ್ಲಿ ತಲ್ಲಣ ಹುಟ್ಟಿಸದೆ ಹೋದರೆ ಅದು ಮಾನವೀಯತೆಯ ಸೋಲು.**

**■ ಫಾತಿಮಾ ರಲಿಯಾ**

ಇಪ್ಪತ್ತನೇ ಶತಮಾನದ ಪ್ರಮುಖ ಸಮಾಜಶಾಸ್ತ್ರಜ್ಞರಾದ ಪಿಯರೆ ಬೌರ್ಡಿಯವರು ‘ಸಾಂಕೇತಿಕ ಹಿಂಸೆ’ (symbolic violence) ಎನ್ನುವ ಪದವನ್ನು ಹುಟ್ಟುಹಾಕಿದ್ದಾರೆ. ಅದು ಸಮಾಜದ ಪ್ರಬಲ ವರ್ಗವೊಂದು ದುರ್ಬಲ ವರ್ಗದ ಮೇಲೆ ನಡೆಸುವ ದೈಹಿಕವಲ್ಲದ ಹಿಂಸೆಯನ್ನು ವಿವರಿಸುತ್ತದೆ. ಈ ಸಾಂಕೇತಿಕ ಹಿಂಸೆ ಎನ್ನುವುದು ಲಿಂಗ, ರಾಷ್ಟ್ರೀಯತೆ, ಜನಾಂಗೀಯ ಗುರುತಿನಂತಹ ಸಾಮಾಜಿಕ ಕ್ಷೇತ್ರದಲ್ಲಿ ಕೆಲವೊಮ್ಮೆ ಗುಪ್ತಗಾಮಿನಿಯಂತೆ, ಇನ್ನು ಕೆಲವೊಮ್ಮೆ ಬಹಿರಂಗವಾಗಿ ಪ್ರಕಟವಾಗಬಹುದು.

ನಮ್ಮ ಟಿ.ವಿ. ಮಾಧ್ಯಮಗಳಲ್ಲಿ ಇತ್ತೀಚೆಗೆ ಅತಿರಂಜಿತವಾಗಿ ವರದಿಯಾದ ಪವಿತ್ರಾ ಲೋಕೇಶ್ ಅವರ ವೈವಾಹಿಕ ಜೀವನದ ಅತಿರೇಕದ ವರದಿಯನ್ನೂ ಬಹುಶಃ ಇದೇ ಗುಂಪಿಗೆ ಸೇರಿಸಬಹುದೇನೋ? ಸಿನಿಮಾ ನಟ–ನಟಿಯರ ಮನೆಯ ಪಡಸಾಲೆಯಲ್ಲೇ ಕ್ಯಾಮೆರಾ ಇಟ್ಟಿರುವಂತೆ ಆಡುತ್ತಿರುವ ಮಾಧ್ಯಮ ಏನನ್ನು ಹೇಳ ಹೊರಟಿದೆ ಎಂಬುವುದೇ ಅರ್ಥವಾಗುವುದಿಲ್ಲ. ಒಬ್ಬ ಮಹಿಳೆಗೆ ಯಾರ ಜೊತೆ, ಹೇಗೆ ಬದುಕಬೇಕು ಎಂಬುದನ್ನು ನಿರ್ಧಾರ ಮಾಡುವ ಹಕ್ಕಿಲ್ಲದಂತೆ, ಘನತೆಯಿಂದ ಬದುಕುವ ಹಕ್ಕಿಲ್ಲದಂತೆ ನಡೆದುಕೊಳ್ಳುತ್ತಿರುವ ವಾಹಿನಿಗಳು ಟಿಆರ್‌ಪಿ ಆಟದಲ್ಲಿ ಇನ್ನೆಷ್ಟು ಕೆಳಮಟ್ಟಕ್ಕಿಳಿಯಬೇಕೆಂದು ನಿರ್ಧರಿಸಿವೆಯೋ?

ಸ್ವತಂತ್ರ ವ್ಯಕ್ತಿತ್ವ ಇರುವ, ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ ಛಾತಿ ಇರುವ, ತನ್ನ ಅನಿಸಿಕೆಗಳನ್ನು ಸ್ಪಷ್ಟ ಮಾತುಗಳಲ್ಲಿ ಹೇಳುವ ಅವಕಾಶ ಇರುವ ಹೆಣ್ಣುಮಗಳೊಬ್ಬಳನ್ನೇ ಮಾಧ್ಯಮ ಈ ರೀತಿ ಹಣಿಯಲು ಯತ್ನಿಸುತ್ತಿರಬೇಕಾದರೆ, ಬದುಕು ಅರಸಿಕೊಂಡು ನಗರಕ್ಕೆ ಬಂದಿರುವ ಕಟ್ಟಡ ಕಾರ್ಮಿಕ ಹೆಣ್ಣುಮಕ್ಕಳ, ಪೌರ ಕಾರ್ಮಿಕರ, ಅಂದಂದಿನ ತುತ್ತಿನ ಚೀಲವನ್ನು ತುಂಬಿಸಲು